# ಕರ್ನಾಟಕ ಸರ್ಕಾರದ ನಡವಳಿ

ವಿಷಯ ಎನ್‌ಪಿಎಸ್‌ಗೆ ಸಂಬಂಧಿಸಿದಂತೆ ಎನ್‌ಎಸ್‌ಡಿಎಲ್ ರವರಿಗೆ ಪಾವತಿಸಬೇಕಾದ 2010-11ನೇ ಸಾಲಿನ ಮೊದಲ ತ್ರೈಮಾಸಿಕ ಅವಧಿಯ ಸೇವಾ ಶುಲ್ಕದ ವೆಚ್ಚವನ್ನು ಭರಿಸುವ ಬಗ್ಗೆ.

****

**ಓದಲಾಗಿದೆ**: 1. ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ (ಸ್ಪೆಷಲ್) 04 ಪಿಇಟಿ 2005 ದಿನಾಂಕ: 31.03.2006.

2. ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ (ಸ್ಪೆಷಲ್) 28 ಪಿಇಎನ್ 2009 ದಿನಾಂಕ: 19.01.2010.
3. ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ (ಸ್ಪೆಷಲ್) 28 ಪಿಇಎನ್ 2009 ದಿನಾಂಕ: 29.03.2010.
4. ನಿರ್ದೇಶಕರು, ಖಜಾನೆ ನಿರ್ದೇಶನಾಲಯ, ವಿಶ್ವೇಶ್ವರಯ್ಯ ಕೇಂದ್ರ, ಬೆಂಗಳೂರು ಅವರ ಪತ್ರ ಸಂಖ್ಯೆ:ಖನಿ/ಎನ್‌ಪಿಎಸ್/28/10-11 ದಿನಾಂಕ: 14.10.2010.

**ಪ್ರಸ್ತಾವನೆ:**

ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ದಿನಾಂಕ: 1.4.2006ರಂದು ಹಾಗೂ ತದ ನಂತರ ಸರ್ಕಾರಿ ಸೇವೆಗೆ ಎಲ್ಲಾ ಸರ್ಕಾರಿ ನೌಕರರಿಗೆ ನೂತನ ಪಿಂಚಣಿ ಯೋಜನೆಯನ್ನು ಜಾರಿಗೊಳಿಸಲಾಗಿದೆ. ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ದಿನಾಂಕ: 19.1.2010ರ ಸರ್ಕಾರಿ ಆದೇಶದಲ್ಲಿ ನೂತನ ಪಿಂಚಣಿ ಯೋಜನೆಯನ್ನು ಜಾರಿಗೊಳಿಸಿ ಮೇಲೆ ಕ್ರಮ ಸಂಖ್ಯೆ (3) ರಲ್ಲಿ ಓದಲಾದ ಸರ್ಕಾರಿ ಆದೇಶ ದಿನಾಂಕ: 29.3.2010ರಲ್ಲಿ ನೂತನ ಪಿಂಚಣಿ ಯೋಜನೆಯ ಮಾರ್ಗದರ್ಶನವನ್ನು ಕಾರ್ಯರೂಪಗೊಳಿಸಲಾಗಿದೆ. ಹಾಗೂ ಈ ಆದೇಶದಲ್ಲಿ ಎನ್‌ಎಸ್‌ಡಿಎಲ್‌ರವರು ಡಿಡಿಓಗಳಿಗೆ ವಿಶಿಷ್ಟವಾದ ಎನ್‌ಪಿಎಸ್ ನೊಂದಣಿ ಸಂಖ್ಯೆಯನ್ನು ಮತ್ತು ನೌಕರರಿಗೆ (ಹೊಸ ಪಿಂಚಣಿ ಯೋಜನೆಯ ವಂತಿಗೆದಾರರಿಗೆ) ಖಾಯಂ ನಿವೃತ್ತಿ ಖಾತೆ ಸಂಖ್ಯೆ: (ಪಿಆರ್‌ಎಎನ್‌ನ್ನು) ಹಂಚಿಕೆ ಮಾಡಲು ಆದೇಶಿಸಲಾಗಿದೆ. ಹಾಗೂ ಈ ನೂತನ ಪಿಂಚಣಿ ಯೋಜನೆಯ ಸಮಗ್ರ ಅನುಸಾರಕ್ಕೆ ಖಜಾನೆ ನಿರ್ದೇಕರನ್ನು ಜವಾಬ್ದಾರರಾದ ರಾಜ್ಯ ನೋಡೆಲ್ ಅಧಿಕಾರಿಯಾಗಿ ನೇಮಿಸಲಾಗಿದೆ.

ಮೇಲೆ ಕ್ರಮ ಸಂಖ್ಯೆ (4) ರಲ್ಲಿ ಓದಲಾದ ನಿರ್ದೇಶಕರು, ಖಜಾನೆ ನಿರ್ದೇಶನಾಲಯ, ವಿಶ್ವೇಶ್ವರಯ್ಯ ಕೇಂದ್ರ, ಬೆಂಗಳೂರು ಅವರ ಪತ್ರ ಸಂಖ್ಯೆ:ಖನಿ/ಎನ್‌ಪಿಎಸ್/28/10-11 ದಿನಾಂಕ: 14.10.2010 ರಲ್ಲಿ ನೂತನ ಪಿಂಚಣಿ ಯೋಜನೆಗೆ ಸಂಬಂಧಿಸಿದಂತೆ ಎನ್‌ಎಸ್‌ಡಿಎಲ್ ಹಾಗೂ ಕರ್ನಾಟಕ ಸರ್ಕಾರಗಳ ನಡುವೆ ಎನ್‌ಪಿಎಸ್ ಸಂಬಂಧ ದಿನಾಂಕ 20.1.2010 ರಂದು ಒಡಂಬಡಿಕೆ ಸಹಿಯಾಗಿದ್ದು ಈ ಒಪ್ಪಂದದ ಕಲಂ-6.1ರ ಎನ್‌ಎಸ್‌ಡಿಎಲ್‌ರವರು ರಾಜ್ಯ ಸರ್ಕಾರದ ನೂತನ ಪಿಂಚಣಿ ಯೋಜನೆಯ ಕೇಂದ್ರೀಯ ದಾಖಲೆ ನಿರ್ವಹಣಾ ಏಜೆನ್ಸಿ (CRA) ಕಾರ್ಯ ನಿರ್ವಹಿಸುತ್ತಾ ದಿನಾಂಕ: 21.7.2010ರ ಪತ್ರದಲ್ಲಿ ಏಪ್ರಿಲ್‌ನಿಂದ ಜೂನ್ 2010ರ ಅಂತ್ಯಕ್ಕೆ ರೂ.64,60.401/-ಗಳ ಬಿಲ್ಲನ್ನು ಸಲ್ಲಿಸಿದ್ದು, ಸದರಿ ಬಿಲ್ಲಿನ ಮೊತ್ತದಲ್ಲಿ SI ಅರ್ಜಿ ನಮೂನೆ ಆಧಾರದ ಮೇಲಿನ 30 ಪ್ರಾನ್‌ಗಳ ಬಾಬ್ತು ರೂ.1,500-/ ಸೇರಿರುತ್ತದೆ. ಈ 30 ಪ್ರಾನ್‌ಗಳು ಈ ಡೂಪ್ಲಿಕೇಟ್ ಆಗಿರುತ್ತದೆ. ಅಂದರೆ ಒಬ್ಬ ನೌಕರನಿಗೆ ಎರಡೆರೆಡು ಪ್ರಾನ್‌ಗಳು ನೀಡಲಾಗಿದೆ. ಆದ್ದರಿಂದ ರೂ.1,500/-ಗಳನ್ನು ಹೊರತುಪಡಿಸಬಹುದೆಂದು ಹಾಗೂ ಅನ್ಯುಯಲ್ ಮೇಂಟೆನೆನ್ಸ್ ಆಫ್

PRA ಮೊತ್ತ ಹಾಗೂ ಎನ್‌ಪಿಎಸ್ ಘಟಕದಲ್ಲಿ ಸ್ವೀಕೃತವಾದ ಪ್ರಾನ್ ಸಂಖ್ಯೆಗಳ ಆಧಾರದ ಮೇಲೆ ಲೆಕ್ಕಾಚಾರ ಮಾಡಲಾದ ಮೊತ್ತದಲ್ಲಿಯೂ ರೂ.14,69,300/–ಗಳ ವ್ಯತ್ಯಾಸವಿದ್ದು, ಈ ಮೊತ್ತವನ್ನು ಪಾವತಿಯಿಂದ ಹೊರತುಪಡಿಸಬಹುದಾಗಿದ್ದು, ಇದರ ಮೊತ್ತ ಒಟ್ಟು ರೂ.14,70,800/–ಮತ್ತು ಇದರ ಮೇಲಿನ ತೆರಿಗೆಗಳ ಮೊತ್ತ ಸೇರಿ ಒಟ್ಟು ಮೊತ್ತ ರೂ.16,22,292/–ಗಳನ್ನು ಹೊರತುಪಡಿಸಿ ರೂ.48,38,109/–ಗಳನ್ನು ಎನ್‌ಎಸ್‌ಡಿಎಲ್‌ಗೆ ಪಾವತಿಸಲು ಸರ್ಕಾರದ ಮಂಜೂರಾತಿ ಕೋರಿದ್ದಾರೆ. ಸರ್ಕಾರವು ನಿರ್ದೇಶಕರು, ಖಜಾನೆ ನಿರ್ದೇಶನಾಲಯ ಅವರ ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ ಕೆಳಕಂಡಂತೆ ಆದೇಶಿಸಿದೆ.

**<u>ಸರ್ಕಾರಿ ಆದೇಶ ಸಂಖ್ಯೆ: ಅಇ (ವಿ) 2 ಸಿಪಿಪಿ 2010,</u>**
**<u>ಬೆಂಗಳೂರು ದಿನಾಂಕ: 19ನೇ ನವೆಂಬರ್ 2010</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ನೂತನ ಪಿಂಚಣಿ ಯೋಜನೆಗೆ ಸಂಬಂಧಿಸಿದಂತೆ ಎನ್‌ಎಸ್‌ಡಿಎಲ್, ರಾಜ್ಯ ಸರ್ಕಾರದ ನೂತನ ಪಿಂಚಣಿ ಯೋಜನೆಯ ಕೇಂದ್ರೀಯ ದಾಖಲೆ ನಿರ್ವಹಣಾ ಏಜೆನ್ಸಿ (CRA) ರವರಿಗೆ 2010–11ನೇ ಸಾಲಿನ ಏಪ್ರಿಲ್‌ನಿಂದ ಜೂನ್ 2010ರವರೆಗಿನ ಮೊದಲನೇ ತ್ರೈಮಾಸಿಕ ಅವಧಿಯ ಸೇವಾ ಶುಲ್ಕದ ಮೊತ್ತವಾದ ರೂ.48,38,109/– (ರೂ. ನಲವತ್ತೆಂಟು ಲಕ್ಷದ ಮೂವತ್ತೆಂಟು ಸಾವಿರದ ನೂರ ಒಂಭತು ಮಾತ್ರ) ಗಳನ್ನು ಪಾವತಿಸಲು ಸರ್ಕಾರವು ಮಂಜೂರಾತಿ ನೀಡಲಾಗಿದೆ. ಈ ಮೊತ್ತವನ್ನು ಕೇಂದ್ರೀಯ ನಿರ್ವಹಣಾ ಏಜೆನ್ಸಿಗೆ ಪಾವತಿಸಲು ಉಪ ನಿರ್ದೇಶಕರು, ಎನ್‌ಪಿಎಸ್ ಇವರನ್ನು ಪ್ರಾಧೀಕರಿಸಲಾಗಿದೆ.

ಈ ವೆಚ್ಚವನ್ನು ಲೆಕ್ಕ ಶೀರ್ಷಿಕೆ 2071–01–117–0–01ರ ಅಡಿಯಲ್ಲಿ ಭರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಪದ್ಮಾವತಿ)
ವಿಶೇಷಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಉಪ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ವಿಶ್ರಾಂತಿ ವೇತನ)

**ಇವರಿಗೆ:**

1) ಮಹಾಲೇಖಪಾಲರು (ಲೆಕ್ಕಪತ್ರ/ಲೆಕ್ಕಪರಿಶೋಧನೆ) ಕರ್ನಾಟಕ, ಬೆಂಗಳೂರು
2) ನಿರ್ದೇಶಕರು, ಖಜಾನೆ ನಿರ್ದೇಶನಾಲಯ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ ಡಾ:ಅಂಬೇಡ್ಕರ್ ವೀಧಿ, ಬೆಂಗಳೂರು.
3) ಉಪ ನಿರ್ದೇಶಕರು, ಎನ್‌ಪಿಎಸ್ ಖಜಾನೆ ನಿರ್ದೇಶನಾಲಯ ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಕೇಂದ್ರ, ಡಾ: ಅಂಬೇಡ್ಕರ್ ವೀಧಿ, ಬೆಂಗಳೂರು.
4) ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು.
5) ಕಛೇರಿ ಪ್ರತಿ, ಶಾಖೆಯ ರಕ್ಷಾ ಕಡತ, ಹೆಚ್ಚುವರಿ ಪ್ರತಿಗಳು